ಜೆ ಸ್ಯಾಂಗ್ (Psy ಎಂದೇ ಜನಪ್ರಿಯ) 2012ರಲ್ಲಿ 'ಗಗ್ನಂ ಸ್ಟೈಲ್' ಎಂಬ ಕೆ–ಪಾಪ್ ಗೀತೆಯನ್ನು ತೇಲಿಬಿಟ್ಟರು. ಸಿಯೋಲ್‌ನ ಗಗ್ನಂ ಎನ್ನುವುದು ಜಿಲ್ಲೆ. ಅಲ್ಲಿಯ ಜೀವನಶೈಲಿಯನ್ನು ಪ್ರತಿನಿಧಿಸುವ ಸಾಲುಗಳನ್ನು ಒಳಗೊಂಡ ಆ ಹಾಡು ಭಾರತದಲ್ಲೂ ಜನಪ್ರಿಯವಾಗಿತ್ತು. 'ಕೊರಿಯನ್ ನಿಯೋಲಾಜಿಸಂ' ಎಂಬ ಪ್ರಕಾರಕ್ಕೆ ಸೇರಿದ ಸಂಗೀತವಿದು. ಆ ಕಾಲಘಟ್ಟದಲ್ಲಿ ಯೂಟ್ಯೂಬ್‌ನಲ್ಲಿ ಅತಿ ಹೆಚ್ಚು ಲೈಕ್‌ಗಳನ್ನು ಪಡೆದ ಗೀತೆ ಎಂದು ಗಿನ್ನಿಸ್ ವಿಶ್ವ ದಾಖಲೆಗೂ ಪಾತ್ರವಾಯಿತು. ಎಂಟಿವಿ ಯುರೋಪ್ ಮ್ಯೂಸಿಕ್ ಅವಾರ್ಡ್ಸ್‌ನಲ್ಲಿ 'ಶ್ರೇಷ್ಠ ಸಂಗೀತದ ಆಲ್ಬಂ' ಎಂಬ ಪ್ರಶಸ್ತಿಗೂ ಭಾಜನವಾಯಿತು.

ಜಿನ್, ಸುಗಾ, ಜೆ–ಹೋಪ್, ಆರ್‌ಎಂ, ಜಿಮಿನ್, ವಿ ಹಾಗೂ ಜುಂಗ್‌ಕುಕ್... ಈ ಏಳು ಯುವಕರನ್ನು ಒಳಗೊಂಡ ಬ್ಯಾಂಡ್ 'ಬಿಟಿಎಸ್'. ಈ ಬ್ಯಾಂಡ್‌ನ ಹೆಸರು ಗೊತ್ತಿಲ್ಲದ ದೇಶವೇ ಇಲ್ಲ ಎನ್ನುವಷ್ಟು ಇದೀಗ ಜನಪ್ರಿಯ. ಅದರಲ್ಲೂ ಪ್ರೌಢಾವಸ್ಥೆಯಲ್ಲಿರುವ ಹೆಣ್ಣುಮಕ್ಕಳಿಗೆ ಈ ಯುವಕರೆಂದರೆ ಪ್ರಾಣ. ಇವರ ಜೀವನಶೈಲಿ ಹೇಗಿದೆ, ಮುಂದಿನ ಕಛೇರಿಯನ್ನು ಎಲ್ಲಿ ಕೊಡುತ್ತಾರೆ, ಇವರೆಲ್ಲರ ಆದಾಯ ಎಷ್ಟು, ಹವ್ಯಾಸಗಳೇನು, ಕುಣಿತದ ಮೋಡಿ ಎಂಥದೆನ್ನುವ ಸೂಕ್ಷ್ಮ ಸಂಗತಿಗಳ ಬಗೆಗೆ ಜಾಲಾಡುವ ಜಾಯಮಾನದ ಮಕ್ಕಳೂ ಇದ್ದಾರೆ. ಈ ಬ್ಯಾಂಡ್ ಹೆಸರಿನ ಉತ್ಪನ್ನಗಳನ್ನೂ ಮಾರುಕಟ್ಟೆಗೆ ಬಿಟ್ಟಿದ್ದಾರೆ. ಅವುಗಳ ಆದಾಯದ ಮೊತ್ತ ಊಹೆಗೂ ನಿಲುಕದ್ದು. ಹಿಪ್ ಹಾಪ್ ಹಾಗೂ ಆರ್ ಅಂಡ್ ಬಿ (ರಿದಂ ಅಂಡ್ ಬ್ಲೂಸ್)



ಜಗತ್ತಿಗೇ ಕೆ–ಪಾಪ್ ಅಮಲು ಏರಿಸಿದ ಬಿಟಿಎಸ್ ಹುಡುಗರು

ಯಶಸ್ವಿ ಕಥನಗಳ ಹಿಂದೆ ಕಣ್ಣೀರಿನ ಉಪಕಥೆಗಳು, ಹೋರಾಟಗಳು ಇದ್ದೇ ಇರುತ್ತವೆ ಎಂದು ಬಲ್ಲವರು ಹೇಳುತ್ತಿರುತ್ತಾರೆ. ಬಿಟಿಎಸ್ ಬ್ಯಾಂಡ್‌ನದ್ದೂ ಹೋರಾಟದ ಕಥೆಯೇ ಹೌದು.

ಈ ಬ್ಯಾಂಡ್‌ನ ಬಹುತೇಕರು ಅಭಿನಯ ಕಲೆ ಹಾಗೂ ನೃತ್ಯದಲ್ಲೇ ಹೆಚ್ಚು ಆಸಕ್ತಿ ಇದ್ದವರು. ತನ್ನ ತಾಯಿಯ ಆಸೆ ಈಡೇರಿಸಬೇಕು ಎಂದು ಜಿನ್ ಆಡಿಷನ್‌ಗೆ ಹೋದದ್ದು. ಹಾಗೆ ನೋಡಿದರೆ ಇವನಿಗೆ ಅಡುಗೆ ಮಾಡುವುದೆಂದರೆ ಬಲು ಇಷ್ಟ. 'ಮ್ಯೂಕ್‌ಬ್ಯಾಂಗ್' ಎಂಬ ಕಾರ್ಯಕ್ರಮದಲ್ಲಿ ತನ್ನಿಷ್ಟದ ತಿನಿಸುಗಳನ್ನು ತಿನ್ನುತ್ತಲೇ ಜಿನ್ ಮಾತನಾಡುವುದನ್ನು ಅಭಿಮಾನಿಗಳು ಮೆಚ್ಚಿದ್ದಾರೆ. ತರಹೇವಾರಿ ಕನ್ನಡಕಗಳನ್ನು ಹಾಕುವುದು ಇವನ ಹವ್ಯಾಸ.

'ಆರ್‌ಎಂ' ಎಂದೇ ಹೆಸರಾಗಿರುವ ಕಿಮ್ ನಮ್–ಜೂನ್ ಒಂಟಿಯಾಗಿ ಆಲ್ಬಂ ಮಾಡುವಷ್ಟು ಪ್ರತಿಭೆ ಇದ್ದವನು. ಆದರೂ ಈ ಬ್ಯಾಂಡ್ ಅನ್ನೇ ಆಯ್ಕೆ ಮಾಡಿಕೊಂಡ. ಆತ್ಮಜಾಗೃತಿಯ ವಿಷಯವಾಗಿ ವಿಶ್ವಸಂಸ್ಥೆಯಲ್ಲಿ ಭಾಷಣ ಮಾಡುವ ಮಟ್ಟಕ್ಕೆ ಇವನ ಪ್ರತಿಭೆ ಬೆಳೆದದ್ದು ವಿಶೇಷ. ಇವನ ಐಕ್ಯೂ ಮಟ್ಟ 148. ಅಂದರೆ ಜಗಜ್ಜಾಣ. 145ಕ್ಕಿಂತ ಹೆಚ್ಚು ಐಕ್ಯೂ ಇದ್ದವರನ್ನು ಇಂಗ್ಲಿಷ್‌ನಲ್ಲಿ 'Highly gifted' ಎಂದೇ ಕರೆಯುತ್ತಾರೆ. ಜನ್ಮಜಾತ ಪ್ರತಿಭೆ ಎಂದು ನಾವು ಇದನ್ನು ಕನ್ನಡೀಕರಿಸಿ ಹೇಳಬಹುದೇನೊ.

ಕಿಮ್ ಟೇ ಹ್ಯುಂಗ್ ಈಗ 'ವಿ' ಎಂದೇ ಹೆಸರುವಾಸಿ. ಸ್ವರ ಸಂಯೋಜಕ ಹಾಗೂ ನಟನಾದ ಇವನು ತಂಡ ಸೇರಿಕೊಂಡ ವರ್ಷದ ನಂತರ ವಿಪರೀತ ಬದಲಾಗಿದ್ದ. ಇವನ ಮುಖವನ್ನು ಬಿಗ್‌ಹಿಟ್ ಎಂಟರ್‌ಟೇನ್‌ಮೆಂಟ್ ಕಂಪನಿಯ ಸಿಇಒ ಕೂಡ ಗುರುತಿಸಿರಲಿಲ್ಲ. ಸ್ಯಾಕ್ಸೊಫೋನ್ ವಾದನದವನ್ನು ಉಸಿರಾಗಿಸಿಕೊಂಡೇ ಬಾಲ್ಯದ ದಿನಗಳನ್ನು ಕಳೆದವನು ಇವನು.

## ಹೀಗಿದೆ ಬಿಟಿಎಸ್ ಹಾದಿ...

ಗ್ಲೋಬಲ್ ಸೈಬಲ್ ಯೂನಿವರ್ಸಿಟಿಯಲ್ಲಿ ಬ್ರಾಡ್‌ಕಾಸ್ಟಿಂಗ್ ಹಾಗೂ ಎಂಟರ್‌ಟೇನ್‌ಮೆಂಟ್‌ನಲ್ಲಿ 2019ರಲ್ಲಿ ಪದವಿ ಪಡೆದ ಸುಗ 13ನೇ ವಯಸ್ಸಿನಿಂದ ರ್‍ಯಾಪರ್. ಸಂಗೀತದ ಅಮಲು ಹತ್ತಿಸಿಕೊಂಡರೂ ಓದಿನಲ್ಲಿ ಹಿಂದೆ ಬೀಳಲಿಲ್ಲವೆನ್ನುವುದು ಪ್ರೇರಣಾದಾಯಕ ಅಂಶ. ಮಾಧ್ಯಮಿಕ ಶಾಲೆಯಲ್ಲಿದ್ದಾಗಲೇ ಜಸ್ಟ್ ಡಾನ್ಸ್ ಅಕಾಡೆಮಿಗೆ ಸೇರಿ ಪಾಪಿಂಗ್ ಹಾಗೂ ಲಾಕಿಂಗ್ ಡಾನ್ಸ್‌ನಲ್ಲಿ ಪಳಗಿದ ಜಿಮಿನ್ ಬಿಟಿಎಸ್ ತಂಡದ ಇನ್ನೊಬ್ಬ ಪ್ರತಿಭೆ. 'ಬೂಸಾನ್ ಸ್ಕೂಲ್ ಆಫ್ ಆರ್ಟ್ಸ್'ನಲ್ಲಿ ಸಮಕಾಲೀನ ನೃತ್ಯ ಪಡೆದ ಮೇಲೆ ಬಿಟಿಎಸ್‌ಗಾಗಿ ಆಡಿಷನ್‌ಗೆ ಒಳಗಾದ. ಅಲ್ಲಿ ತರಬೇತಿಗೆ ಆಯ್ಕೆಯಾದ ಮೇಲೆ ಕೊರಿಯನ್ ಆರ್ಟ್ಸ್ ಹೈಸ್ಕೂಲ್‌ನಲ್ಲೂ ನೃತ್ಯಾಭ್ಯಾಸ ಮಾಡಿದ.

ಜೆ–ಹೋಪ್ ಒಂದು ಕಾಲದಲ್ಲಿ ತಂಡವೊಂದರ ಬ್ಯಾಕ್‌ಅಪ್ ಡಾನ್ಸರ್ ಆಗಿದ್ದವನು. 2015ರಲ್ಲಿ 'ಐ ವರ್ಸ್' ಎಂಬ ಸೋಲೊ ರ್‍ಯಾಪ್ ಆಲ್ಬಂ ಹೊರತಂದು, ಸೌಂಡ್ ಕ್ಲೌಡ್ ಮೂಲಕ ಸದ್ದು ಮಾಡಿದ. 'ನ್ಯೂರಾನ್' ಎಂಬ ಸ್ಟ್ರೀಟ್ ಡಾನ್ಸ್ ತಂಡದಲ್ಲಿ ಇವನ ಕುಣಿತ ಜನರಿಗೆ ಮುದನೀಡಿತ್ತು. 4ನೇ ತರಗತಿಯಲ್ಲಿ ಓದುತ್ತಿದ್ದಾಗಲೇ ಗ್ವಾಂಗ್ಜು ಮ್ಯೂಸಿಕ್ ಅಕಾಡೆಮಿ ಸೇರಿಕೊಂಡು, ಆರು ವರ್ಷ ಸಂಗೀತಾಭ್ಯಾಸ ಮಾಡಿದ. 2019ರಲ್ಲಿ 'ಚಿಕನ್ ನೂಡಲ್ ಸೂಪ್' ಎಂಬ ಸೋಲೊ ಹಾಡನ್ನು ಅವನು